ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 637/2022

ಸಿ ಡಬ್ಲ್ಯೂ-3
ಪಿ ಡಬ್ಲ್ಯೂ- 2

ದಿಃ 18-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ರಾಘವೇಂದ್ರ ಗಣಪತಿ ಜನ್ನು
ತಂದೆಯ ಹೆಸರುಃ ಗಣಪತಿ
ವಯಸ್ಸುಃ 43 ವರ್ಷ
ಉದ್ಯೋಗಃ ಶಿರಸ್ತೇದಾರರು
ವಿಳಾಸಃ ಶಿರಸಿ

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನಾನು 2018 ರಿಂದ 2023 ರವರಗೆ ಅಂಕೋಲಾದಲ್ಲಿ ಕಂದಾಯ ನಿರೀಕ್ಷಕನಾಗಿ ಕಾರ್ಯವನ್ನು ನಿರ್ವಹಿಸಿರುತ್ತೇನೆ. ನನಗೆ ಚಾಸಾ-2 ರವರ ಪರಿಚಯವಿರುತ್ತದೆ.

2. ದಿಃ29-05-2021 ರಂದು ಪಿ ಎಸ್ ಐ ಇವರು ನನ್ನನ್ನು ಅಕ್ಕಿ ಹಿಡಿದ ವಿಷಯಕ್ಕಾಗಿ ಪೊಲೀಸ್ ಠಾಣೆಗೆ ಕರೆದಿರುತ್ತಾರೆ. ನಾನು ಹೋದಾಗ ಮಂಜುನಾಥ ನಾಯಕ (ಚಾಸಾ-1), ಚಾಸಾ-2 ಮತ್ತು ಪೊಲೀಸ್ ಸಿಬ್ಬಂದಿಯವರು ಇದ್ದರು. ಪಿ ಎಸ್ ಐ ಇವರು ವಿಷಯವನ್ನು ಪಂಚರಾದ ನಮಗೆ ತಿಳಿಸಿದ್ದು, ಪಂಚನಾಮೆಯನ್ನು ಜರುಗಿಸಲು

ಸಹಕರಿಸಲು ಕೋರಿಕೊಂಡಿರುತ್ತಾರೆ. ಅಲ್ಲಿ ಟಾಟಾ ಏಸ್ ವಾಹನವಿದ್ದು, ಅದರಲ್ಲಿ 29 ಅಕ್ಕಿ ಚೀಲಗಳು ಇದ್ದವು. ವಾಹನ ಸಂಖ್ಯೆ: ಕೆ ಎ 30 ಎ 0066 ಆಗಿರುತ್ತದೆ. ಚೀಲಗಳಿಗೆ 1 ರಿಂದ 29 ರಂತೆ ಸಂಖ್ಯೆಯನ್ನು ಹಾಕಿ ಕೆಂಪು ಬಣ್ಣದಿಂದ ಗುರುತು ಮಾಡಿರುತ್ತಾರೆ. ನಂತರ ಒಂದೊಂದು ಚೀಲವನ್ನು ತೂಕ ಮಾಡಿ ಒಟ್ಟು ತೂಕ 983 ಕೆ.ಜಿ ಆಗಿರುತ್ತದೆ.

3. ನಂತರ 29 ಚೀಲಗಳಲ್ಲಿ 5 ಕೆ. ಜಿ ಅಕ್ಕಿಯನ್ನು ಮಾದರಿಗಾಗಿ ತೆಗೆಯಲಾಯಿತು. ನಂತರ ಪಂಚರಾದ ನಮ್ಮನ್ನು ನಿಲ್ಲಿಸಿಕೊಂಡು ಫೋಟೋವನ್ನು ತೆಗೆದುಕೊಂಡಿರುತ್ತಾರೆ. ಅಕ್ಕಿಯ ಮೌಲ್ಯ ಅಂದಾಜು ರೂ.15 ಸಾವಿರ ಆಗಬಹುದು. ಪಂಚನಾಮೆಯನ್ನು ಅಂದಾಜು ಬೆಳಿಗ್ಗೆ 11.45 ರಿಂದ 1.30 ಗಂಟೆಯವರೆಗೆ ಜರುಗಿಸಲಾಯಿತು. ಈಗಾಗಲೇ ನಿಪಿ-3 ಎಂದು ಗುರುತಿಸಲಾದ ಜಪ್ತಿ ಪಂಚನಾಮೆಯ ಮೇಲೆ ಇರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಸಹಿಯನ್ನು ನಿಪಿ-3 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ಮತ್ತು 5 ಫೋಟೋಗಳನ್ನು ಗುರುತಿಸುತ್ತಾರೆ.

4. ನಂತರ ಅದೇ ದಿನ ಘಟನಾ ಸ್ಥಳಕ್ಕೆ ಹೋಗಿ ಸುಮಾರು ಮಧ್ಯಾಹ್ನ 2 ರಿಂದ 2.45 ಗಂಟೆಯತನಕ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಲಾಯಿತು. ಆ ಸಮಯದಲ್ಲಿ ಚಾಸಾ-1,2 ಮತ್ತು ಪೊಲೀಸರು ಇದ್ದರು. ಅಲ್ಲಿಯೂ ಸಹ ಸ್ಥಳದ ಫೋಟೋವನ್ನು ತೆಗೆಯಲಾಯಿತು. ಈಗಾಗಲೆ ನಿಪಿ-7 ಎಂದು ಗುರುತಿಸಲಾದ ಘಟನಾ ಸ್ಥಳದ

ಪಂಚನಾಮೆಯ ಮೇಲೆ ಇರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಸಹಿಯನ್ನು ನಿಪಿ-7 ಬಿ ಎಂದು ಗುರುತಿಸಲಾಯಿತು. ನಿಪಿ-8 ಫೋಟೋವನ್ನು ಸಾಕ್ಷಿಯು ಗುರುತಿಸುತ್ತಾರೆ. ಸಾಕ್ಷಿಯು ಮುಮಾ-1 ನ್ನುಹಾಗೂ ಅದರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಸಹಿಯನ್ನು ಮುಮಾ-1 ಬಿ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುঃ</u> ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ರೂ.300/- ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.